# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 941 |
| ಸದಸ್ಯರ ಹೆಸರು | ಶ್ರೀ ಶರವಣ.ಟಿ.ಎ. |
| ಉತ್ತರಿಸುವ ದಿನಾಂಕ | 13-12-2023 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಇತ್ತೀಚಿನ ದಿನಗಳಲ್ಲಿ ದೇವಸ್ಥಾನಗಳಿಗೆ ಭೇಟಿ ನೀಡುವವರ ಸಂಖ್ಯೆ ಅಧಿಕವಾಗಿದ್ದು, ಮುಜರಾಯಿ ಇಲಾಖೆ ವ್ಯಾಪ್ತಿಯ ದೇವಸ್ಥಾನಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಪಡಿಸುವ ಬಗ್ಗೆ ಹಾಗೂ ದೇವಸ್ಥಾನಗಳಿಗೆ ಕಾಣಿಕೆ ನೀಡುವ ಭಕ್ತರಿಗೆ ಮಾಹಿತಿ ನೀಡಲು ಸರ್ಕಾರ ಕಾರ್ಯ ಯೋಜನೆಗಳನ್ನು ರೂಪಿಸಿದೆಯೇ; ಹಾಗಿದ್ದಲ್ಲಿ ಉದ್ದೇಶಿತ ಮಾಹಿತಿ ನೀಡುವುದು;</td><td>ಹಿಂದೂ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ಸಂಸ್ಥೆಗಳಿಗೆ ಬರುವ ಭಕ್ತಾದಿಗಳಿಗೆ ಮೂಲಭೂತ ಸೌಕರ್ಯ/ಸೌಲಭ್ಯಗಳ ಕುರಿತಂತೆ ಆಯುಕ್ತರ ಸುತ್ತೋಲೆ ಸಂಖ್ಯೆ: CNR1/CR/ 346/2010-11 ದಿನಾಂಕ:22.03.2011ರಲ್ಲಿ 32 ಅಂಶಗಳನ್ನು ಒಳಗೊಂಡಂತೆ ಹಾಗೂ ಈ ಕೆಳಕಂಡ ಸುತ್ತೋಲೆಗಳಲ್ಲಿ ಆದೇಶಗಳನ್ನು ಹೊರಡಿಸಲಾಗಿದ್ದು, ಅದರನ್ವಯ ಕ್ರಮವಹಿಸುವಂತೆ ಎಲ್ಲಾ ಕಾರ್ಯ ನಿರ್ವಾಹಕ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ.
<table>
<tr><th>ಕ್ರ. ಸಂ</th><th>ಸುತ್ತೋಲೆ ಸಂಖ್ಯೆ/ ದಿನಾಂಕ</th><th>ವಿಷಯ</th></tr>
<tr><td>1</td><td>ಎಡಿಎಂ.10/ಸಿಆರ್/ 19/2011-12 ದಿನಾಂಕ:16.01.2012</td><td>ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಗೆ ಒಳಪಡುವ ದೇವಾಲಯ -ಗಳಲ್ಲಿ ಸಿ.ಸಿ.ಟಿ.ವಿ ಮತ್ತು ಕ್ಯಾಮರಾವನ್ನು ಅಳವಡಿಸುವ ಬಗ್ಗೆ</td></tr>
<tr><td>2</td><td>ಎಡಿಎಂ.11/ಸಿಆರ್/ 139/2017-18 ದಿನಾಂಕ:19.12.2017</td><td>ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ದೇವಾಲಯಗಳಲ್ಲಿ ಸಂಪೂರ್ಣವಾಗಿ ಪ್ಲ್ಯಾಸ್ಟಿಕ್ ಬಳಕೆಯನ್ನು ನಿಷೇಧಿಸುವ ಬಗ್ಗೆ.</td></tr>
<tr><td>3</td><td>E-110309 HRICE-ADM0MISC/270/ 2023, ದಿನಾಂಕ:21.06.2023</td><td>ಕರ್ನಾಟಕ ಸರ್ಕಾರದ ಹಿಂದೂ ಧಾರ್ಮಿಕ ಸಂಸ್ಥೆಗಳಾದ 'ಎ' ವರ್ಗ ಹಾಗೂ 'ಬಿ' ವರ್ಗ ಸಂಸ್ಥೆಗಳಲ್ಲಿ 65 ವರ್ಷ ಮೇಲ್ಪಟ್ಟ ಹಿರಿಯ ನಾಗರೀಕರಿಗೆ ನೇರವಾಗಿ ದೇವರ ದರ್ಶನ ಸೌಲಭ್ಯ ಒದಗಿಸುವ ಬಗ್ಗೆ</td></tr>
<tr><td>4</td><td>ಎಡಿಎಂ11/ಸಿಆರ್/ 02/2022-23 ದಿನಾಂಕ:22.08.2023</td><td>ಅಧಿಸೂಚಿತ ದೇವಾಲಯಗಳಿಗೆ ಬರುವ ತಾಯಿಯಂದಿರು ಮಗುವಿಗೆ ಹಾಲುಣಿಸಲು ಅನುಕೂಲವಾಗುವಂತೆ ಪ್ರತ್ಯೇಕ ಕೊಠಡಿ (ಕ್ಯಾಬಿನ್) ವ್ಯವಸ್ಥೆ ಕಲ್ಪಿಸುವ ಬಗ್ಗೆ.</td></tr>
</table></td></tr>
</table>

| | | |
|---|---|---|
| | | 5 \| ಎಡಿಎಂ11/ಸಿಆರ್/09/2021-22 ದಿನಾಂಕ:11.11.2021 \| ರಾಜ್ಯದ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ದೇವಾಲಯಗಳಲ್ಲಿ ಹೈಮಾಸ್ ವಿದ್ಯುತ್ ದೀಪ ಮತ್ತು ಆರ್.ಒ..ಪ್ಲಾಂಟ್ (ಶುದ್ಧ ಕುಡಿಯುವ ನೀರಿನ ಘಟಕ) ಅಳವಡಿಸುವ ಬಗ್ಗೆ. |
| ಆ) | ವಿಷನ್ ಗ್ರೂಪ್‌ನ ರಚನೆ ಹಾಗೂ ಅದರ ಕಾರ್ಯವೈಖರಿಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು: | ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ರಾಜ್ಯದ 34,563 ಅಧಿಸೂಚಿತ ದೇವಾಲಯಗಳು ಇದ್ದು, ಇವುಗಳಲ್ಲಿ ಪ್ರವರ್ಗ 'ಎ' 205, ಪ್ರವರ್ಗ 'ಬಿ' 193 ಮತ್ತು ಪ್ರವರ್ಗ 'ಸಿ' 34165 ದೇವಾಲಯಗಳಿರುತ್ತವೆ.<br>ಈ ದೇವಾಲಯಗಳ ಸಮಗ್ರ ಅಭಿವೃದ್ಧಿಗೆ ದೇವಾಲಯದ ಆದಾಯವನ್ನು ಬಳಸಲಾಗುತ್ತದೆ. ಅತ್ಯಗತ್ಯವಿರುವ ಸಂದರ್ಭಗಳಲ್ಲಿ ಸರ್ಕಾರದಿಂದ ಮತ್ತು ಸಾಮಾನ್ಯ ಸಂಗ್ರಹಣಾ ನಿಧಿಯಿಂದ ಪ್ರವರ್ಗ 'ಸಿ' ದೇವಾಲಯಗಳ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ .<br>ಈ ಕುರಿತು ದಿನಾಂಕ:13-10-2023ರಂದು ನಡೆದ ರಾಜ್ಯ ಧಾರ್ಮಿಕ ಪರಿಷತ್ತಿನ ಸಭೆಯಲ್ಲಿ ರಾಜ್ಯದಲ್ಲಿ ಧಾರ್ಮಿಕ ಇಲಾಖೆಯ ವ್ಯಾಪ್ತಿಗೆ ಒಳಪಡುವ ದೇವಾಲಯಗಳ ವಾಸ್ತವ ಸ್ಥಿತಿಗತಿಯನ್ನು ಪರಿಶೀಲಿಸಿ ಅವುಗಳ ಸಮಗ್ರ ಅಭಿವೃದ್ಧಿ ಕೈಗೊಳ್ಳುವ ಸಲುವಾಗಿ ಸಮಾಜದ ವಿವಿಧ ಕ್ಷೇತ್ರಗಳ ಪ್ರಮುಖರನ್ನು ಒಳಗೊಂಡ ಒಂದು Vision Group ರಚಿಸಲು ನಿರ್ದೇಶನವನ್ನು ನೀಡಲಾಗಿರುತ್ತದೆ. ಅದರಂತೆ ಸಮಾಜದ ವಿವಿಧ ಕ್ಷೇತ್ರಗಳ ಪ್ರಮುಖರನ್ನು ಒಳಗೊಂಡ ಒಂದು ಒಂದು Vision Group ರಚಿಸಲು ಪರಿಶೀಲಿಸಲಾಗುತ್ತಿದೆ. |
| ಇ) | ರಾಜ್ಯದ ಅನೇಕ ಜನಪ್ರಿಯ ದೇವಾಲಯಗಳಲ್ಲಿ ಮೂಲಭೂತ ಸೌಕರ್ಯಗಳು ಮತ್ತು ಉಳಿದುಕೊಳ್ಳಲು ಉಚಿತ ವಸತಿ ಇಲ್ಲವೇ ಅಗ್ಗದ ದರದಲ್ಲಿ ಛತ್ರಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅವುಗಳ ನಿರ್ಮಾಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದ ಅನೇಕ ಜನಪ್ರಿಯ ದೇವಾಲಯಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳ ಆಧಾರದಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳು ಮತ್ತು ಉಳಿದುಕೊಳ್ಳಲು ವಸತಿ ವ್ಯವಸ್ಥೆಯನ್ನು ಭಕ್ತಾಧಿಗಳ ಅನುಕೂಲಕ್ಕಾಗಿ ಕಲ್ಪಿಸಲಾಗಿದೆ. ದೇವಾಲಯಗಳಿಗೆ ಸೇರಿದ ವಸತಿಗೃಹ ಮತ್ತು ಛತ್ರಗಳ ನಿರ್ವಹಣೆಗಾಗಿ ವೆಚ್ಚವನ್ನು ಅವುಗಳ ಆದಾಯದಿಂದಲೇ ಭರಿಸಬೇಕಾಗಿರುವುದರಿಂದ ಅವುಗಳನ್ನು ಉಚಿತವಾಗಿ ಅಥವಾ ಅಗ್ಗದ ದರಗಳಲ್ಲಿ ಒದಗಿಸಲು ಸಾಧ್ಯವಿರುವುದಿಲ್ಲ. ಆದರೂ ಸಹ ಭಕ್ತಾಧಿಗಳಿಗೆ ಅನುಕೂಲವಾಗುವ ರೀತಿ ಆಯಾಯ ದೇವಾಲಯಗಳು ಅಸ್ತಿತ್ವದಲ್ಲಿರುವ ಸ್ಥಳದ ಸ್ಥಳೀಯ ಮಾರುಕಟ್ಟೆ ದರದಂತೆ, ಶುಲ್ಕವನ್ನು ವಿಧಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲಾಗಿದೆ.<br>ಪ್ರಸಕ್ತ ಜನಪ್ರಿಯ ಒಟ್ಟು 58 ದೇವಾಲಯಗಳಲ್ಲಿ ಒಟ್ಟು 1657 ಕೊಠಡಿಗಳನ್ನು ಸಾರ್ವಜನಿಕರ ಅನುಕೂಲಕ್ಕಾಗಿ ಕಲ್ಪಿಸಲಾಗಿದೆ. |

| | | |
|---|---|---|
| ಈ) | ಸರ್ಕಾರ ಮುಜರಾಯಿ ಇಲಾಖೆ ವ್ಯಾಪ್ತಿಯ ದೇವಸ್ಥಾನಗಳಲ್ಲಿ ಮೂಲಭೂತ ಸೌಕರ್ಯ ಸೇರಿದಂತೆ ಛತ್ರಗಳನ್ನು ನಿರ್ಮಿಸಲು ಆಯವ್ಯಯದಲ್ಲಿ ಕಾಯ್ದಿರಿಸಿದ ಅನುದಾನವೆಷ್ಟು; ಹಾಗೂ ಇಲ್ಲಿವರೆಗೆ ಖರ್ಚಾದ ಮತ್ತು ಉಳಿಕೆ ಮೊತ್ತವೆಷ್ಟು? | 2023-24ನೇ ಸಾಲಿನಲ್ಲಿ ಸರ್ಕಾರವು ದೇವಸ್ಥಾನಗಳ ಮೂಲಭೂತ ಸೌಕರ್ಯ ದುರಸ್ತಿ, ಜೀರ್ಣೋದ್ಧಾರ ಹಾಗೂ ಹೊರ ರಾಜ್ಯ ಛತ್ರಗಳ ನಿರ್ವಹಣೆಗಾಗಿ **ರೂ.8725.00**ಲಕ್ಷಗಳ ಅನುದಾನವನ್ನು ಒದಗಿಸಿದ್ದು, **ರೂ.1202.00**ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಇಲ್ಲಿಯವರೆಗೂ **ರೂ.67.50** ಲಕ್ಷಗಳ ಅನುದಾನ ವೆಚ್ಚವಾಗಿರುತ್ತದೆ.<br><br>ಛತ್ರಗಳ ನಿರ್ವಹಣೆಗೆಂದು ಪ್ರತ್ಯೇಕವಾಗಿ ಯಾವುದೇ ಅನುದಾನವನ್ನು ಮೀಸಲಿರಿಸಿರುವುದಿಲ್ಲ. |

ಸಂಖ್ಯೆ: ಕಂಇ 136 ಮುಸಪು 2023

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು